ಅ) ಅರ್ಜಿ ಸಲ್ಲಿಸಿದ ಅವಲಂಬಿತರಿಗೆ ಇಲ್ಲಿಯವರೆಗೆ ಉದ್ಯೋಗ ಒದಗಿಸದೇ ಇರಲು ಕಾರಣಗಳೇನು;

ಇ) ಉದ್ಯೋಗ ನಿರೀಕ್ಷೆಯಲ್ಲಿರುವ ಅವಲಂಬಿತರಿಗೆ ಎಂದಿನಿಂದ ಉದ್ಯೋಗ ಒದಗಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಅಧಿಕಾರವನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿರುವುದರಿಂದ ಈ ಮಾಹಿತಿ ಕೇಂದ್ರೀಕೃತವಾಗಿ ಕೂಡಲೇ ಲಭ್ಯವಿರುವುದಿಲ್ಲ.

ಆ) ಸೇವೆಯಲ್ಲಿದ್ದಾಗ ಮೃತರಾದ ಮಹಿಳಾ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಆಸ್ಪವನ್ನು ಕಲ್ಪಿಸಲು ಜಾರಿಯಲ್ಲಿರುವ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಈಗಾಗಲೇ ಕ್ರಮಕ್ಕೆಗೊಳ್ಳಲಾಗಿದೆ ಹಾಗೂ ಸದ್ಯದಲ್ಲಿಯೇ ಇದನ್ನು ಅಂತಿಮಗೊಳಿಸಲಾಗುವುದು.

ಇ) ಸದರಿ ಆಸ್ಪದವನ್ನು ಕಲ್ಪಿಸಿದ ಕೂಡಲೆ.

ಗುಳೇದಗುಡ್ಡ ಮತಕ್ಷೇತ್ರದಲ್ಲಿ ಕಾಡಾ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು.

12(313) ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳೇದಗುಡ್ಡ) :— ಮಾನ್ಯ ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಬಾದಾಮಿ, ಹುನಗುಂದ, ಬಾಗಲಕೋಟೆ ತಾಲ್ಲೂಕಿನ ಗ್ರಾಮಗಳಲ್ಲಿ ಕಾಡಾ (ಯುಕೆಪಿ) ಹಾಗೂ ಕಾಡ (ಮಲಪ್ರಭಾ ಮತ್ತು ಘಟಪ್ರಭಾ) ಯೋಜನೆಗಳ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ?

ಆ) ಹಾಗಿದ್ದರೆ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ಸಂಪೂರ್ಣ ಆರ್ಥಿಕ ಮತ್ತು ಭೌತಿಕ ವಿವರ ನೀಡುವುದು)?

ಶ್ರೀ ಕೆ. ವೆಂಕಟೇಶ್ (ರಾಜ್ಯ ಕಾಡಾ ಸಚಿವರು) :—

ಅ) ಹೌದು.

ಅ) ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಲಾದ ಕಾಮಗಾರಿ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರಮ ಸಂ.	ತಾಲ್ಲೂಕು ಮತ್ತು ಗ್ರಾಮ	ಕಾಮಗಾರಿ ವಿವರ	ಖರ್ಚು : ವೆಚ್ಚ (ಲಕ್ಷ ರೂ.ಗಳಲ್ಲಿ)
1.	ಹುನಗುಂದ ತಾಲ್ಲೂಕಿನ ಹಡಗಲಿ, ಗಂಗೂರು, ಬಸವನ ಹಾಳ, ಸುಳೇಭಾವಿ, ಅಮರವಾಡಿಗಿ, ಈ ಐದು ಗ್ರಾಮಗಳಲ್ಲಿ ಹಾಗೂ ಬಾಗಲಕೋಟಿ ತಾಲ್ಲೂಕಿನ ನೇರಲೆಕೇರಿ, ಹಿರೇಸಳಕೇರಿ, ಮದಕಂಡಿ, ತಿಮ್ಮಾಪೂರ, ಬಿಲಕೇರಿ, ಈ ಐದು ಗ್ರಾಮಗಳಲ್ಲಿ ಒಟ್ಟು ಹತ್ತು ಸಂಖ್ಯೆ.	ಹತ್ತು ಅಂಗನವಾಡಿ: ಬಾಲವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ ತಲಾ ರೂ. 1.75 ಲಕ್ಷಗಳಂತೆ	17.50
2.	ಹುನಗುಂದ ತಾಲ್ಲೂಕಿನ ಹೂವಿನ ಹಾಳ ಮತ್ತು ಸೋಮಲಾಪುರ ಈ ಎರಡು ಸ್ಥಳಗಳಲ್ಲಿ ಹಾಗೂ ಬಾಗಲಕೋಟಿ ತಾಲ್ಲೂಕಿನ ಬಾಗಲಕೋಟಿ ಮತ್ತು ಶಿರೂರು ಈ ಎರಡು ಸ್ಥಳಗಳಲ್ಲಿ ಒಟ್ಟು ನಾಲ್ಕು ಸಂಖ್ಯೆ.	ಪ್ರೈಮರಿ ಶಾಲೆಗೆ ಹೆಚ್ಚುವರಿ ಕೋಣೆಗಳ ನಿರ್ಮಾಣ ಕಾರ್ಯ ತಲಾ 250 ಲಕ್ಷ	10.00
3.	ಬಾಗಲಕೋಟಿ ತಾಲ್ಲೂಕಿನ ಚಿಕ್ಕಮ್ಯಾಗೇರಿ ಗ್ರಾಮ	ಪ್ರೌಢಶಾಲಾ ವಿದ್ಯಾರ್ಥಿನಿಯರಿಗಾಗಿ ಶೌಚಾಲಯ ನಿರ್ಮಾಣ	1.00
4.	ಬಾದಾಮಿ ತಾಲ್ಲೂಕಿನ ತಿಮ್ಮಸಾಗರ ಗ್ರಾಮ	ಶಾಲಾ ಕಟ್ಟಡಕ್ಕೆ ಹೆಚ್ಚುವರಿ ಕೋಣೆಗಳ ನಿರ್ಮಾಣ	1.76
5.	ಬಾದಾಮಿ ತಾಲ್ಲೂಕಿನ ಕೋಟೊಕಲ್ಲು ಗ್ರಾಮ	ಸಮುದಾಯ ಭವನ ನಿರ್ಮಾಣ	1.50
		ಒಟ್ಟು	31.76 ಲಕ್ಷಗಳು